International Journal of Kannada Research 2016; 2(2): 27-31




International Journal of Kannada Research
www.kannadajournal.com

**ISSN: 2454–5813**
IJSR 2016; 2(2): 27-31
© 2016 IJKS
www.kannadajournal.com
Received: 08-12-2015
Accepted: 10-01-2016

**ಪ್ರಕಟಣೆಯ ಕೃಪೆಗಾಗಿ**
ಎಸ್. ಸಿದ್ದೇಗೌಡ, ಕನ್ನಡ ಸಹಾಯಕ ಪ್ರಾಧ್ಯಾಪಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಳವಳ್ಳಿ ಇಮೇಲ್

**Correspondence**
**ಪ್ರಕಟಣೆಯ ಕೃಪೆಗಾಗಿ**
ಎಸ್. ಸಿದ್ದೇಗೌಡ, ಕನ್ನಡ ಸಹಾಯಕ ಪ್ರಾಧ್ಯಾಪಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಳವಳ್ಳಿ ಇಮೇಲ್

# ಕಂಬಾರರ ಶಿವರಾತ್ರಿ

**ಪ್ರಕಟಣೆಯ ಕೃಪೆಗಾಗಿ**

ನವ್ಯ ಕಾಲಘಟ್ಟದ ಪ್ರಮುಖ ನಾಟಕಕಾರರಲ್ಲಿ ಕಂಬಾರರೂ ಒಬ್ಬರು. ನವ್ಯದ ಲಕ್ಷಣಗಳನ್ನು ಜೀರ್ಣಿಸಿಕೊಂಡು, ಜನಪದೀಯ ಅಂಶಗಳನ್ನು ಅರಗಿಸಿಕೊಂಡು ಸಾಹಿತ್ಯ ಕೃಷಿಯನ್ನು ಎಡಬಿಡದೆ ಮಾಡುತ್ತಿದ್ದಾರೆ. ಕಂಬಾರರು ರಚಿಸಿರುವ ಎಲ್ಲಾ ಪ್ರಕಾರದ ಸಾಹಿತ್ಯದಲ್ಲಿ ಜನಪದದ ಸೆಲೆ ಅಡಗಿರುವುದು ಅವರ ಜನಪದದ ಬಗೆಗಿನ ಒಲವನ್ನೂ, ಬೆಳೆದು ಬಂದ ಪರಿಸರವನ್ನೂ, ಅದರ ಬಗೆಗಿನ ಅಭಿರುಚಿಯನ್ನೂ ತಿಳಿಸುತ್ತದೆ. ಕಂಬಾರರು ಕಾವ್ಯ, ನಾಟಕ, ಕಾದಂಬರಿ, ಸಣ್ಣಕಥೆ, ಸಂಶೋಧನೆ – ಹೀಗೆ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಸುಮಾರು 52 ಕೃತಿಗಳನ್ನು ರಚಿಸಿದ್ದಾರೆ. ಅಲ್ಲದೆ ಚಲನಚಿತ್ರ ಕ್ಷೇತ್ರದಲ್ಲಿಯೂ ಆಸಕ್ತಿ ಹೊಂದಿದ್ದು, ಆ ಕ್ಷೇತ್ರದಲ್ಲಿಯೂ ತಮ್ಮ ಛಾಪನ್ನು ಮೂಡಿಸಿದ್ದಾರೆ. ಹಾಗಾಗಿ ಕಂಬಾರರದು ಬಹುಮುಖ ಪ್ರತಿಭೆ. ಸರಳ ಸಜ್ಜನಿಕೆಯ ವ್ಯಕ್ತಿತ್ವ. ಕನ್ನಡಕ್ಕೆ 8ನೇ ಜ್ಞಾನಪೀಠ ಪ್ರಶಸ್ತಿ ತಂದಿತ್ತ ಮಹಾನ್ ಕನಸುಗಾರರು. ಇಂತಹ ಕಂಬಾರರಿಂದ ಸುದೀರ್ಘ ವಿರಾಮದ ಅನಂತರ ಅಂದರೆ 12 ವರ್ಷಗಳ ತರುವಾಯ ರಚಿತವಾದ ಬಹು ನಿರೀಕ್ಷೆಯ ನಾಟಕ ಶಿವರಾತ್ರಿ.

ಕನ್ನಡ ಸಾಹಿತ್ಯದಲ್ಲಿ 12ನೆಯ ಶತಮಾನ ತುಂಬಾ ಪ್ರಮುಖವಾದ ಕಾಲಘಟ್ಟವಾಗಿದೆ. ಈ ಅವಧಿಯಲ್ಲಿ ಸಾಮಾಜಿಕ ಮತ್ತು ಸಾಹಿತ್ಯಿಕ ಹೀಗೆ ಎರಡು ವಿಧದ ಕ್ರಾಂತಿಗಳು ಘಟಿಸಿದವು. ಎರಡೂ ಕ್ರಾಂತಿಯ ಹರಿಕಾರ ಬಸವಣ್ಣನವರು. ಎರಡೂ ಕ್ರಾಂತಿಯ ಹರಿಕಾರನಾದ ಬಸವಣ್ಣನ ಜೀವನ ಮತ್ತು ಆತನ ವಿಚಾರಗಳು ಚರ್ಚಿತವಾದಷ್ಟು ಕನ್ನಡ ಸಾಹಿತ್ಯದಲ್ಲಿ ಯಾರ ಬಗ್ಗೆಯೂ ನಡೆದಿಲ್ಲ ಎಂದೇ ಹೇಳಬಹುದು. ಬಸವಣ್ಣ ಬಾಳಿ, ಬದುಕಿ ಈಗಾಗಲೇ 800ಕ್ಕಿಂತಲೂ ಅಧಿಕ ವರ್ಷಗಳಾಗಿದ್ದರೂ ಆತನ ವ್ಯಕ್ತಿತ್ವ ಇಂದಿಗೂ ಅನುಕರಣೀಯ; ಆಕರ್ಷಣೀಯ. ಹಾಗಾಗಿಯೇ ಕನ್ನಡ ಸಾಹಿತ್ಯದಲ್ಲಿ ಬಸವಣ್ಣನಷ್ಟು ಕಾಡುವ, ಕನವರಿಸುವ, ಸಾಹಿತ್ಯದ ವಸ್ತುವಾಗುವ ಮತ್ತೊಬ್ಬ ಸಿಗುವುದಿಲ್ಲ. 13ನೇ ಶತಮಾನದ ಹರಿಹರನಿಂದ ಆರಂಭವಾಗಿ ಇಲ್ಲಿಯವರೆಗೆ ಹಲವರಿಗೆ ಬಸವಣ್ಣ ಕಾವ್ಯ, ಕಥೆ, ಕಾದಂಬರಿ ಮತ್ತು ನಾಟಕಗಳ ನಾಯಕನಾಗಿದ್ದಾನೆ. "ಒಂದು ಅಧ್ಯಯನದ ಪ್ರಕಾರ ಇಂತಹ ಕೃತಿಗಳ ಸಂಖ್ಯೆ ಇನ್ನೂರನ್ನು ದಾಟುತ್ತದೆ". ಎಂಬುದಾಗಿ ಸಿ.ಎನ್ ರಾಮಚಂದ್ರನ್ ಅವರು ತಿಳಿಸಿದ್ದಾರೆ. ಕೇವಲ ನಾಟಕ ಪ್ರಭೇದವನ್ನೆ ಗಮನಿಸಿದರೆ ಬಸವಣ್ಣನವರನ್ನು ಮುಖ್ಯವಾಗುಳ್ಳ, ಕಲ್ಯಾಣದ ಕ್ರಾಂತಿಯ ವಸ್ತುವನ್ನುಳ್ಳ ನಾಟಕಗಳು ಕನ್ನಡ ಸಾಹಿತ್ಯದಲ್ಲಿ ಅಪಾರವಾಗಿ ದೊರೆಯುತ್ತವೆ. ಆಧುನಿಕ ಕಾಲದಲ್ಲಿ ಈ ಚಳುವಳಿಯ ಹಿನ್ನೆಲೆಯಲ್ಲಿ ಬಂದಿರುವ ಮೊದಲ ಕೃತಿ ಪ್ರಾಯಃ ಬಿ.ಸಿ. ಬಳೂರ್ ಅವರಿಂದ 1918ರಲ್ಲಿ ರಚಿಸಲ್ಪಟ್ಟ ಬಸವೇಶ್ವರ ನಾಟಕ. ಅನಂತರ ಬಂದಿರುವ ಗುರುತಿಸಬಹುದಾದ ನಾಟಕಗಳೆಂದರೆ ಅನಕೃ ಅವರ ಜಗಜ್ಯೋತಿ ಬಸವೇಶ್ವರ, ಲಂಕೇಶರ ಸಂಕ್ರಾಂತಿ, ಎಂ.ಎಂ ಕಲಬುರ್ಗಿ ಅವರ ಕೆಟ್ಟಿತು ಕಲ್ಯಾಣ, ಎಚ್.ಎಸ್ ಶಿವಪ್ರಕಾಶರ ಮಹಾಚೈತ್ರ, ಗಿರೀಶ್ ಕಾರ್ನಾಡರ ತಲೆದಂಡ ಇತ್ಯಾದಿ. ಇದೇ ಸಾಲಿಗೆ ಸೇರುವಂತಹವುದು ಕಂಬಾರರ ಶಿವರಾತ್ರಿ.

'ಶಿವರಾತ್ರಿ' ಎನ್ನುವುದು ಒಂದು ರೂಪಕವಾಗಿ ನಾಟಕದಲ್ಲಿ ಬಳಕೆಯಾಗಿದೆ. ಸಾಮಾನ್ಯವಾಗಿ ಶಿವರಾತ್ರಿಯಂದು ಶಿವ ದೇವಾಲಯಗಳಲ್ಲಿ ಮತ್ತು ಶಿವನ ಶರಣರಲ್ಲಿ ಸಂಭ್ರಮ ಅಡಗಿರುತ್ತದೆ. ದೇವಾಲಯಗಳಲ್ಲಿ ಬೆಳಕಿನ ವಾತಾವರಣವಿದ್ದು, ವಿಶೇಷ ಪೂಜೆ, ಭಜನೆ, ಜಾಗರಣೆಗಳಿರುತ್ತವೆ. ಆದರೆ ನಾಟಕದಲ್ಲಿ ಉದ್ದಕ್ಕೂ ಕತ್ತಲು ಮನೆ ಮಾಡಿರುವುದನ್ನು ಕಾಣಬಹುದು. ಇದು ಅಜ್ಞಾನ, ಅಂಧಕಾರದಲ್ಲಿ ಇಡೀ ಕಲ್ಯಾಣ ನಗರ ಮುಳುಗಿದೆ ಎಂಬುದನ್ನು ಸೂಚ್ಯವಾಗಿ ತಿಳಿಸುತ್ತದೆ. ನಾಟಕ ನಡೆಯುವುದೇ ಶಿವರಾತ್ರಿಯ ರಾತ್ರಿಯಲ್ಲಿ. ಆದರೂ ಕಲ್ಯಾಣ ನಗರದ ಶಿವ ದೇವಾಲಯಗಳಲ್ಲಿ ಬೆಳಕೆಂಬುದೇ ಇಲ್ಲ. ಮತ್ತು ಶರಣರಲ್ಲಿ ಉತ್ಸಾಹದ ಬದಲು ಭಯ, ಆತಂಕ ಅವರನ್ನು ಆವರಿಸಿದೆ. ಇದನ್ನು ನಾಟಕದ ಬೇರೆ-ಬೇರೆ ಸಂದರ್ಭದಲ್ಲಿ ಪಾತ್ರಗಳಾಡುವ ಮಾತುಗಳಲ್ಲಿ ಕಾಣಬಹುದು.

**ತುಂಗವ್ವ:** ಊರಾಗ ಒಂದು ದೀಪಿಲ್ಲ. ಸಣ್ಣ ಬೆಳಕಿಲ್ಲ. ಶಿವರಾತ್ರಿ ಕತ್ತಲಿ ಗಂವ್ಯೆಂತೈತಿ ಹಿಂತಾ ಕತ್ತಲ್ಯಾಗ ಯಾಕ ಅಡ್ಡಾತೈತಿ.....

**ಕೊತವಾಲ:** ಶಿವರಾತ್ರಿಯ ಕತ್ತಲು. ಶಿವ ದೇವಸ್ಥಾನಗಳಲ್ಲಿ ಕೂಡ ದೀಪ ಹಚ್ಚಿಲ್ಲ.

**ಹುಚ್ಚಿ:** ಇಂದು ಶಿವರಾತ್ರಿ: ಬೆಳಕಿಲ್ಲ ದೇವಾಲಯಗಳಲ್ಲಿ. ಕತ್ತಲೆಯಲ್ಲಿ ಅಡಗಿಕೊಂಡಿದ್ದಾವೆ ದೇವರುಗಳೆಲ್ಲ ರಾಜನಿಗೆ ಹೆದರಿ!

ಹೀಗೆ ಅಂದಿನ ಶಿವರಾತ್ರಿಯು ಸಾಮಾನ್ಯ ರಾತ್ರಿಯಾಗಿರದೆ ಘೋರ ರಾತ್ರಿಯಾಗಿ ಶಿವಶರಣರಿಗೆ ಭಾಸವಾಗಿರುವುದನ್ನು ನಾಟಕದ ಉದ್ದಕ್ಕೂ ಕಾಣಬಹುದು.

ಕಂಬಾರರು ನಾಟಕದ ಆರಂಭದಲ್ಲಿ ಒಂದು ವಿಭಿನ್ನ ರೀತಿಯ ತಂತ್ರವನ್ನು ಅಳವಡಿಸಿಕೊಂಡಿರುವುದನ್ನು ಕಾಣಬಹುದು. ನಾಟಕಕ್ಕೆ ಬೇಕಾದ ಅಡಿಪಾಯ ಅಥವಾ ಪೂರ್ವ ಪೀಠಿಕೆಯನ್ನು ಪ್ರಸ್ತಾವನೆಯ ರೂಪದಲ್ಲಿ ಸೂತ್ರಧಾರ ಮತ್ತು ನಟಿಯ ಸಂಭಾಷಣೆಯ ಮೂಲಕ ಹಾಕಿಕೊಟ್ಟಿದ್ದಾರೆ. ನಾಟಕದ ಆರಂಭ ಶಿವಶರಣರ ಬೇಟೆಯ ಮೂಲಕ ಆಗಿದೆ. ಶಿವಶರಣರ ಬೇಟೆಗೆ ಕಾರಣವಾದ ಅಂಶ/ಘಟನೆಯನ್ನು ಆರಂಭದಲ್ಲೇ ತಿಳಿಸಲಾಗಿದೆ. ಬಿಜ್ಜಳ ಚಾಲುಕ್ಯರ ರಾಜಧಾನಿಯನ್ನು ಆಕ್ರಮಿಸಿ ರಾಜನಾದುದು. ಆ ಸಂಧರ್ಭದಲ್ಲಿ ಆಯ–ವ್ಯಯದ ವಿಚಾರದಲ್ಲಿ ಬಿಜ್ಜಳ ಯಾರನ್ನೂ ನಂಬದಿರುವ ಸಂದರ್ಭದಲ್ಲಿ ಬಸವಣ್ಣ ಅಲ್ಲಿಗೆ ಬಂದು ಆಯವ್ಯಯದ ಉಸ್ತುವಾರಿಯನ್ನು ವಹಿಸಿಕೊಳ್ಳುವುದು. ಎಂತಹ ಉನ್ನತ ಹುದ್ದೆಗೇರಿದರೂ ಅಧಿಕಾರದ ಮದ ಏರದೆ ಕೂಡಲ ಸಂಗಯ್ಯನ ಅನುಯಾಯಿಯಾಗಿಯೇ ಉಳಿದು ಮಹಾಮನೆಯನ್ನು ನಿರ್ಮಾಣ ಮಾಡಿದುದು, ಮಹಾಮನೆಯ ತೇಜಸ್ಸು ಅರಮನೆಯನ್ನು ಚುಚ್ಚಿದ್ದು, ಹರಳಯ್ಯ ಮಧುವರಸರು ಜಾತಿಯಲ್ಲಿ ಹೊಲೆಯ ಮತ್ತು ಬ್ರಾಹ್ಮಣರಾದರೂ ಶರಣ ಜಾತಿಯನ್ನು ಮೀರಿದರೆ, ಅರಮನೆಯವರು ಮನುಷ್ಯನಿಗೆ ಒಂದಲ್ಲ ಒಂದು ಜಾತಿ ಇದೆ ಎಂದು ಸಾಧಿಸುವುದು, ಇದನ್ನು ಮೀರಿ ಬಸವಣ್ಣ ಹರಳಯ್ಯನ ಮಗ ಮತ್ತು ಮಧುವರಸನ ಮಗಳ ನಡುವೆ ಅಂತರ್ಜಾತಿ ವಿವಾಹ ಮಾಡಲು ಇದನ್ನು ಸಹಿಸದ ಬಿಜ್ಜಳ ಅವರ ಕಣ್ಣುಗಳನ್ನು ಕೀಳಿಸಿ ನೇಣಿಗೇರಿಸುವುದು. ಆ ವಿಚಾರವಾಗಿ ದಂಗೆ ಶುರುವಾಗಿ ಕಲ್ಯಾಣ ನಗರ ಗೊಂದಲಮಯವಾಗಿರುವ ವಿಚಾರ – ಈ ಎಲ್ಲಾ ಮಾಹಿತಿಯನ್ನು ಆರಂಭದಲ್ಲೇ ತಿಳಿಸುವ ಮೂಲಕ ಉದ್ದೇಶಿತ ಅಂಶದ ಕಡೆಗೆ ಹೊರಳಿದ್ದಾರೆ.

ನಾಟಕದಲ್ಲಿ ಬಸವಣ್ಣ, ಬಸವಣ್ಣನ ಚಳವಳಿ ಮತ್ತು ಅದರ ಪರಿಣಾಮವೇ ಮುಖ್ಯವಾದರೂ ನಾಟಕವನ್ನು ಅದಲ್ಲದೆ ಇತರೆ ಬೇರೆ ಬೇರೆ ದೃಷ್ಟಿಕೋನಗಳಿಂದ ಅಧ್ಯಯನ ಮಾಡಲು ಅವಕಾಶವಿದೆ. ಅಂತಹ ಪ್ರಮುಖ ದೃಷ್ಟಿಕೋನಗಳೆಂದರೆ:

- ಬಸವಣ್ಣ ಮತ್ತು ಸಾಮಾನ್ಯ ಜನರು
- ಬಸವಣ್ಣ ಮತ್ತು ಶರಣರು
- ಬಸವಣ್ಣ ಮತ್ತು ನಗರ ದೇವತೆ
- ಬಸವಣ್ಣ ಮತ್ತು ಮುಗ್ಧ ಸಂಗಯ್ಯ
- ಬಸವಣ್ಣ ಮತ್ತು ಬಿಜ್ಜಳ

ಹೀಗೆ ಅಧ್ಯಯನ ದೃಷ್ಟಿಕೋನಗಳನ್ನು ಗುರುತಿಸಬಹುದು.

**ಬಸವಣ್ಣ ಮತ್ತು ಸಾಮಾನ್ಯ ಜನ**

12ನೇ ಶತಮಾನ ಎಂದ ಕೂಡಲೇ ಸಾಹಿತ್ಯ ಚರಿತ್ರಕಾರರಿಗೆ ಮತ್ತು ಇತಿಹಾಸಕಾರರಿಗೆ ಕಂಡುಬರುವುದು ಬಸವಣ್ಣ, ಆತನ ಕಾಲದ ವಚನಕಾರರು, ಬಿಜ್ಜಳ, ಕಲ್ಯಾಣ ನಗರ – ಇವೇ ಮೊದಲಾದುವು. ಆದರೆ ಆ ಅವಧಿಯಲ್ಲಿ ಇವರಲ್ಲದೆ ಶ್ರೀಸಾಮಾನ್ಯ ಜನರೂ 12ನೇ ಶತಮಾನದ ಎಲ್ಲಾ ಘಟನೆಗಳಿಗೂ ಪ್ರತ್ಯಕ್ಷ ಸಾಕ್ಷಿಯಾಗಿದ್ದರು ಎಂಬುದನ್ನು ಯಾರೂ ಅಷ್ಟಾಗಿ ಗಣನೆಗೆ ತೆಗೆದುಕೊಂಡಿಲ್ಲ. ಸಾಮಾನ್ಯ ಜನರ ದೃಷ್ಟಿಯಲ್ಲಿ ಬಸವಣ್ಣ ಮತ್ತು ಆತನ ವಿಚಾರಗಳನ್ನು ನೋಡುವ ಪ್ರಯತ್ನವನ್ನು ಕಂಬಾರರು ಬಹಳ ಸೂಕ್ಷ್ಮವಾಗಿ ಮಾಡಿದ್ದಾರೆ. ಬಸವಣ್ಣನ ಪ್ರಭಾವ ಆ ಕಾಲದ ಸಾಮಾನ್ಯ ಜನರ ಮೇಲೆ ಯಾವ ರೀತಿ ಆಗಿದೆ. ಬಸವಣ್ಣ ಮತ್ತು ಆತನ ವಿಚಾರದ ಕುರಿತು ಸಾಮಾನ್ಯರ ಅಭಿಪ್ರಾಯವೇನು? ಇತ್ಯಾದಿ ವಿಚಾರಗಳು ನಾಟಕದಲ್ಲಿ ಚರ್ಚಿತವಾಗಿವೆ.

ಕಲ್ಯಾಣಕ್ಕೆ ಬಂದ ಬಸವಣ್ಣ ತನ್ನ ವೈಚಾರಿಕ ವಿಚಾರಗಳನ್ನು ಸಮರ್ಥವಾಗಿ ತಿಳಿಸಿದ ಕಾರಣ ಅದನ್ನು ಅರ್ಥ ಮಾಡಿಕೊಂಡವರು ಆತನ ಅನುಯಾಯಿಗಳಾಗಿ ಶಿವಶರಣರಾಗಿದ್ದಾರೆ. ಆದರೌತನ ವಿಚಾರಗಳನ್ನು ಸರಿಯಾಗಿ ಆರಿಯದ ಜನ ಆತನಿಂದ ದೂರವಿದ್ದಾರೆ. ಆದರೂ ಬಸವಣ್ಣನ ಆತ್ಮ, ಲಿಂಗದ ವಿಚಾರ ತಿಳಿದುಕೊಂಡಿದ್ದಾರೆ. ಅದರೆ ಆತ್ಮ ಮತ್ತು ಲಿಂಗದ ಸ್ಪಷ್ಟ ಚಿತ್ರಣ ತಿಳಿಯದವರಾಗಿದ್ದಾರೆ. ಈ ವಿಚಾರವನ್ನು ಕಲ್ಲಪ್ಪ, ತುಂಗವ್ವ, ಕಾಶವ್ವ, ಮುದುಕಪ್ಪ ಇವರ ಮಾತುಗಳಲ್ಲಿ ಕಾಣಬಹುದು.

**ಕಲ್ಲಪ್ಪ:** ಮಹಾಮನ್ಯಾಗ ಶರಣರು
ತಮ್ಮ ತಮ್ಮ ಆತ್ಮ ಅಂಗ್ಯೆಯಾಗ ಇಟಗೊಂಡು
ಕುಣಿಸ್ಯಾಡುತಾರಂತ! ನಿನಗೊತ್ತಿರಬೇಕಲ್ಲ ಮುದುಕಪ್ಪ?
ಅಣ್ಣಾವರು ಎಲ್ಲಾರಿಗೂ ಒಂದೊಂದು ಆತ್ಮ ಕೊಡುತ್ತಾರಂತ?

**ತುಂಗವ್ವ:** ಹೆಂಗೊಂದು?

**ಕಾಶವ್ವ:** ಪುಕ್ಕಟ ಕೊಡ್ತಾರವ, ಅದಕ್ಕೆ ಲಿಂಗಪ್ಪ ಅಂತಾರ.

ಹಾಗೆಯೇ ಬಸವಣ್ಣನ 'ಕಾಯಕ' ತತ್ವ ಅಲ್ಲಿನ ಸಾಮಾನ್ಯ ಜನರಿಗೂ ಅತಿ ಹೆಚ್ಚಿನ ಪ್ರಭಾವ ಬೀರಿರುವುದನ್ನು ಕಾಣಬಹುದು. ಅರಮನೆಯಿಂದ ಕದ್ದ ಬೆಲೆ ಬಾಳುವ ಬಂಗಾರದ ಸರವನ್ನು ದಾಮೋದರ ಕಾಶವ್ವನ ಮನೆಯಲ್ಲಿ ಬಚ್ಚಿಡುತ್ತಾನೆ. ಆದರೆ ಬೆಲೆ ಬಾಳುವ ಆ ಸರ ಅವರಿಗೆ ಸತ್ತ ಹೆಗ್ಗಣದ ರೀತಿ ಭಾಸವಾಗುತ್ತದೆ. ಕಾರಣ ಅದನ್ನು ಅವರು ದುಡಿದು ಸಂಪಾದಿಸಿದ್ದಲ್ಲ ಆದುದುರಿಂದ ಅದನ್ನು ಬೀದಿಗೆ ಒಗೆಯಲು ಮುಂದಾಗುತ್ತಾರೆ. ಅಲ್ಲದೆ ಬಸವಣ್ಣ ಸಾಮಾನ್ಯ ಜನರಿಗೆ ಪವಾಡ ಪುರುಷನಂತೆ ಭಾಸವಾಗಿದ್ದಾನೆ.

**ಬಸವಣ್ಣ ಮತ್ತು ಶರಣರು**

ಬಸವಣ್ಣ ಶರಣರ ಪಾಲಿನ ದೈವ. ಅವರ ಪಾಲಿಗೆ ತಮ್ಮನ್ನು ಉದ್ಧಾರ ಮಾಡಲು ಭೂಮಿಗೆ ಅವತರಿಸಿದ ಸಾಕ್ಷಾತ್ ಶಿವ. ಬಸವಣ್ಣನವರ ಪ್ರಭಾವ ಶರಣರ ಮನೆ–ಮನಗಳಲ್ಲಿ ಆವರಿಸಿದೆ. ರಾಜ್ಯದ ರಾಜನಾದ ಬಿಜ್ಜಳನಿಗಿಂತ ಅತಿ ಹೆಚ್ಚಿನ ಮನ್ನಣೆಯನ್ನು ಬಸವಣ್ಣನವರಿಗೆ ನೀಡುತ್ತ, ಅವರನ್ನು ಅನುಸರಿಸುತ್ತಾ, ಅವರು ಹಾಕಿ ಕೊಟ್ಟ ಮಾರ್ಗದಲ್ಲಿಯೇ ನಡೆಯುವವರು. ಬಸವಣ್ಣನವರ ಪ್ರಭಾವ ಯಾರನ್ನೂ ಬಿಡದು. ಕಳ್ಳ ಚಿಕ್ಕಯ್ಯ, ದಾಮೋದರ, ಸೂಳೆ ಸಾವಂತ್ರಿ, ಕಾಮಾಕ್ಷಿ ಮೊದಲಾದವರು ಬಸವಣ್ಣನವರ ಪ್ರಭಾವಕ್ಕೆ ಒಳಗಾದವರಲ್ಲಿ ಪ್ರಮುಖರು. ಬಸವಣ್ಣನವರನ್ನು ಕೊಲ್ಲಲು ಕಾಶ್ಮೀರದಿಂದ ಬಂದ ಕಳ್ಳಚಿಕ್ಕಯ್ಯ ಬಸವಣ್ಣನವರ ಪ್ರಭಾವದಿಂದ ಕಳ್ಳತನವನ್ನು ಬಿಟ್ಟು ಶರಣಾಗುತ್ತಾನೆ; ಶರಣನಾಗುತ್ತಾನೆ. ಅರಮನೆಯಲ್ಲಿ ಬೆಲೆ ಬಾಳುವ ಬಂಗಾರದ ಸರವನ್ನು ಕದ್ದ ದಾಮೋದರ ಬಸವಣ್ಣನವರ ವಿಚಾರಗಳನ್ನು

ಕಳ್ಳಚಿಕ್ಕಯ್ಯನಿಂದ ಕೇಳಿ, ತಿಳಿದು ತಾನು ಮಾಡುತ್ತಿರುವುದು ತಪ್ಪು ಎಂದು ತಪ್ಪಿನ ಅರಿವಾಗಿ ಶರಣನಾಗುತ್ತಾನೆ ಮತ್ತು ಬಸವಣ್ಣನವರ ವಿಚಾರಗಳನ್ನು ಸಮರ್ಥಿಸಿಸಿ, ಆ ಮೂಲಕ ಬಿಜ್ಜಳನ ವರ್ತನೆಯನ್ನು ನೇರವಾಗಿ ಖಂಡಿಸುತ್ತಾನೆ. ಮತ್ತು ಇದರಿಂದಾಗಿಯೇ ಬಿಜ್ಜಳನಿಂದ ಹತನಾಗುತ್ತಾನೆ. ಶರಣೆಯಾದ ಸೂಳೆ ಸಾವಂತ್ರಿ ಮತ್ತು ಕಾಮಾಕ್ಷಿಯರು ವೃತ್ತಿಯಲ್ಲಿ ವೇಶ್ಯೆಯರಾದರೂ ವೃತ್ತಿ ಧರ್ಮವನ್ನು ಮರೆತವರಲ್ಲ. ತಮ್ಮ ನಿತ್ಯದ ಬೆಲೆಗಿಂದ ಅಧಿಕವಾದ ವಸ್ತುವಿಗೆ ಆಸೆ ಪಡುವುದಿಲ್ಲ. ಮುಗ್ಧ ಸಂಗಯ್ಯ ನೀಡಿದ ಬಂಗಾರದ ಸರ ತನ್ನ ಬೆಲೆಗಿಂತ ಅಧಿಕ ಎಂದು ಕಾಮಾಕ್ಷಿ ನಿರಾಕರಿಸಿ, ಆತ್ಮ ಸಂತೋಷಕ್ಕಾಗಿ ಸೇವೆ ಮಾಡಲು ಒಪ್ಪುವುದು. ಸೂಳೆ ಸಾವಂತ್ರಿ ಆ ಸರವನ್ನು ಮಾಡದ ಮೂಲೆಯಲ್ಲಿ ಒಗೆಯುವುದು- ಇವೆಲ್ಲವೂ ಬಸವಣ್ಣನವರ ಪ್ರಭಾವವೇ ಆಗಿವೆ. ಅಲ್ಲದೆ ಬಸವಣ್ಣನವರಿಗಾಗಿ ಯಾವ ತ್ಯಾಗಕ್ಕೂ ಶರಣರು ಸಿದ್ದರಾಗಿದ್ದಾರೆ ಎಂಬುದು ನಾಟಕದ ಉದ್ದಕ್ಕೂ ಕಂಡು ಬರುತ್ತದೆ.

**ಬಸವಣ್ಣ ಮತ್ತು ನಗರ ದೇವತೆ**

ಕಲ್ಯಾಣ ನಗರದ ಅಧಿದೇವತೆಯ ಪಾತ್ರವನ್ನು ಕಂಬಾರರು ಪ್ರತಿಮೆಯ ರೂಪದಲ್ಲಿ ಬಳಸಿದ್ದಾರೆ. ಕಲ್ಯಾಣ ನಗರದ ಪ್ರತಿಬಿಂಬ ಆ ದೇವತೆ. ನಗರ ಹುಟ್ಟಿದಾಗಿನಿಂದಲೂ ಇರುವವಳು. ಬಸವಣ್ಣ ಮತ್ತು ಮುಗ್ದ ಸಂಗಯ್ಯರು ಕಲ್ಯಾಣಕ್ಕೆ ಬಂದಾಗಿನಿಂದ ಅವರ ಒಳ ಹೊರಗನ್ನು ಬಲ್ಲವಳು. ಬಿಜ್ಜಳನ ಮನಸ್ಥಿತಿಯನ್ನು ಪ್ರತಿಮಿಸುವ ಪಾತ್ರವಾಗಿಯೂ ಕಂಬಾರರು ನಾಟಕದ ಆರಂಭದಲ್ಲಿಯೇ ಆಕೆಯನ್ನು ಮುದುಕಿ ಮತ್ತು ಹುಚ್ಚಿಯಾಗಿ ತೋರಿಸುವುದರ ಮೂಲಕ ಬಿಜ್ಜಳನ ವಯಸ್ಸು ಮತ್ತು ಆತನ ಮನೋವಿಕಾರತೆಯನ್ನು ಓದುಗರ ಮನಗಾಣಿಸಿದ್ದಾರೆ. ಬಿಜ್ಜಳನ ಮನಸ್ಥಿತಿ ಮತ್ತು ಬಸವಣ್ಣನವರ ಮನಸ್ಥಿತಿಯ ನಡುವೆ ನಡೆಯುವ ತಾಕಲಾಟದ ವಿಷಯವನ್ನು ಹುಚ್ಚಿಯಾದ ನಗರ ದೇವತೆಯ ಪಾತ್ರ ಪ್ರತಿಬಿಂಬಿಸುತ್ತದೆ. ಬಸವಣ್ಣ ಕೂಡಲ ಸಂಗಯ್ಯನಾಗಿ, ಭಕ್ತನಾಗಿ, ಮಹಾಮನೆ ನಿರ್ಮಾಣ ಮಾಡಿ ಬಿಜ್ಜಳನ ಅವಕೃಪೆಗೆ ಒಳಗಾಗುವುದು. ಆ ಮೂಲಕ ಬಿಜ್ಜಳ ಶರಣರ ಮೇಲೆ ಸೇಡಿನ ತಂತ್ರ ಬಳಸುವುದು ಇದೆಲ್ಲಕ್ಕೂ ನಗರ ದೇವತೆ ಸಾಕ್ಷಿಯಾಗಿದ್ದಾಳೆ. ಆದರೆ ಬಿಜ್ಜಳನಲ್ಲಿರುವ ದ್ವಂದ್ವ ಮನಸ್ಥಿತಿಯೂ ನಗರ ದೇವತೆಯ ಮೂಲಕ ಅರಿವಿಗೆ ಬರುತ್ತದೆ. ಮನುಷ್ಯನಲ್ಲಿ ಸಾತ್ವಿಕ ಮತ್ತು ತಾಮಸ ಎಂಬ ಎರಡು ಗುಣಗಳಿರುತ್ತವೆ. ಬಿಜ್ಜಳನ ಸಾತ್ವಿಕ ಗುಣ ನಗರ ದೇವತೆಯ ಪಾತ್ರದ ಮೂಲಕ ಕಂಡು ಬರುವುದಲ್ಲದೆ ಬಸವಣ್ಣನ ಇಂದಿನ ಪರಿಸ್ಥಿತಿಯ ಬಗ್ಗೆ ಮರುಕ ಉಳ್ಳವಳಾಗಿದ್ದಾಳೆ. ಬಸವಣ್ಣ ಮತ್ತು ಮುಗ್ಧ ಸಂಗಯ್ಯರನ್ನು ಕಲ್ಯಾಣದಲ್ಲಿ ಉಳಿಸಿಕೊಳ್ಳುವ ಕೊನೆಯ ಪ್ರಯತ್ನವನ್ನು ಮಾಡುತ್ತಾಳೆ.

**ಬಸವಣ್ಣ ಮತ್ತು ಮುಗ್ದ ಸಂಗಯ್ಯ**

ಸಾಕ್ಷಾತ್ ಕೂಡಲ ಸಂಗಯ್ಯನೇ ಇಲ್ಲಿ ಮುಗ್ದ ಸಂಗಯ್ಯನಾಗಿದ್ದಾನೆ. ಬಸವಣ್ಣ ಮತ್ತು ಶರಣರ ಮುಗ್ದತೆಯನ್ನು ಈ ಪಾತ್ರದ ಮೂಲಕ ಪ್ರತಿಮಿಸಿದ್ದಾರೆ ಕಂಬಾರರು. ಬಸವಣ್ಣ ಕಲ್ಯಾಣಕ್ಕೆ ಬಂದ ಸಂದರ್ಭದಲ್ಲಿ ಆತನ ಜೊತೆಯಲ್ಲೇ ಬಂದು ಬಸವಣ್ಣನಿಗೆ ಒಂದು ನೆಲೆ ಕಲ್ಪಿಸುವುದರ ಮೂಲಕ ಆತನ ಬಗ್ಗೆ ಕಾಳಜಿಯುಳ್ಳವನು. ಹಾಗೂ ಕಲ್ಯಾಣದಲ್ಲಿ ಉಂಟಾದ ಶರಣರ ಮಾರಣ ಹೋಮದ ಸಂದರ್ಭದಲ್ಲಿ ತನ್ನ ಭಕ್ತರಿಗೆ ನೆಲೆಯಿಲ್ಲ ಎಂಬುದನ್ನು ಅರಿತು ಅವರನ್ನು ಅಲ್ಲಿಂದ ಕರೆದೊಯ್ಯಲು ಕಲ್ಯಾಣಕ್ಕೆ ಬಂದಿದ್ದಾನೆ. ಈ ನಡುವೆ ಬಸವಣ್ಣ ಸಂಗಯ್ಯನ ಧ್ಯಾನದಲ್ಲೇ ಇದ್ದು, ಆತನನ್ನು ಅನುಸರಿಸುತ್ತಿದ್ದ ಎಂಬುದು ಆತನ ವಚನದ ಮೂಲಕ ತಿಳಿಯುತ್ತದೆ.

ಕಾಳಿಯ ಕಣ್ ಕಾಣದ ಮುನ್ನ
ತ್ರಿಪುರ ಸಂಹಾರದಿಂದ ಮುನ್ನ
ಹರಿವಿರಿಂಚಿಗಳಿಂದ ಮುನ್ನ
ಉಮೆಯ ಕಲ್ಯಾಣದಿಂದ ಮುನ್ನ ಮುನ್ನ ಮುನ್ನ
ಅಂದಿಗೆಳೆಯ ನೀನು ಹಳಬ ನಾನು
ಮಹಾದಾನಿ ಕೂಡಲ ಸಂಗಮದೇವಾ.

ಮರ್ತ್ಯದ ಹಲವಾರು ಸಂದರ್ಭಗಳಲ್ಲಿ ಸಂಗಯ್ಯನ ಸಂಬಂಧವನ್ನು ಮಾತ್ರ ಬಸವಣ್ಣ ಕಳೆದುಕೊಳ್ಳದಿರುವುದು ಈ ವಚನದ ಮೂಲಕ ತಿಳಿಯುತ್ತದೆ. ಅಲೌಕಿವಾದ ಕೂಡಲ ಸಂಗನ ಪಾತ್ರವನ್ನು ಲೌಕಿಕದ ನೆಲೆಗೆ ತಂದು ನಾಟಕದಲ್ಲಿ ಪಾತ್ರವಾಗಿಸಿರುವುದು ಶರಣರ ಮಹತ್ವವನ್ನು ಉನ್ನತೀಕರಿಸುವ ಪ್ರಯತ್ನವಿರಬಹುದು. ಏಕೆಂದರೆ ಕಲ್ಯಾಣಕ್ಕೆ ಬಂದ ಸಂಗಯ್ಯ ಲಿಂಗ ಪೂಜೆಗೆ ಆಯ್ದು ಕೊಳ್ಳುವುದು ಸೂಳೆ ಸಾವಂತ್ರಿಯ ಮನೆಯನ್ನು. ಆ ಮೂಲಕ ಶರಣೆಯರಾದ ಅವರ ಮಹತ್ವವನ್ನು ಲೋಕಕ್ಕೆ ತಿಳಿಸುವುದು, ಆ ಮೂಲಕ ಬಸವಣ್ಣ ಮತ್ತು ಬಿಜ್ಜಳನ ಸಮಾಗಮಕ್ಕೆ ವೇದಿಕೆಯನ್ನು ನಿರ್ಮಿಸುವುದೂ ಆಗಿದೆ.

**ಬಸವಣ್ಣ ಮತ್ತು ಬಿಜ್ಜಳ**

ಬಿಜ್ಜಳ ಕಲ್ಯಾನ ನಗರದ ಚರ್ಕವರ್ತಿ. ಆತನ ಮಂತ್ರಿ ಬಸವಣ್ಣ. ಬಿಜ್ಜಳ ಯಾರನ್ನೂ ಅಷ್ಟು ಸುಲಭವಾಗಿ ನಂಬದೇ ಇರುವ ಅನುಮಾನ ಪ್ರಾಣಿ. ಅಂತಹ ಸಂದರ್ಭದಲ್ಲಿ ಬಸವಣ್ಣ ಕಲ್ಯಾಣಕ್ಕೆ ಬರುತ್ತಾನೆ. ಬಸವಣ್ಣನ ಪ್ರಭಾವದ ತೆಕ್ಕೆಗೆ ಒಳಗಾದ ಬಿಜ್ಜಳ ಆತನನ್ನು ತನ್ನ ಮಂತ್ರಿಯಾಗಿ ಆಯ್ಕೆ ಮಾಡಿಕೊಳ್ಳುತ್ತಾನೆ. ಆದರೆ ಬಿಜ್ಜಳನ ಆಸ್ಥಾನದಲ್ಲಿ ಅನ್ಯಾಯ, ಅಧರ್ಮಗಳೇ ಅಧಿಕವಾಗಿದ್ದು, ಬ್ರಾಹ್ಮಣ ಸಮುದಾಯ ಗೌರವದ ಸ್ಥಾನವನ್ನು ಅಲಂಕರಿಸಿರುತ್ತದೆ. ಶ್ರೀಸಾಮಾನ್ಯರು ಮತ್ತು ಶೂದ್ರರ ಸ್ಥಿತಿ ಶೋಚನೀಯವಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಬಸವಣ್ಣ ಮಹಾಮನೆಯನ್ನು ನಿರ್ಮಿಸಿ, ತುಳಿತಕ್ಕೆ ಒಳಗಾದವರಿಗೆ ಆಶ್ರಯ ನೀಡುತ್ತಾನೆ. ಅವರಿಗೆ ಲಿಂಗ ದೀಕ್ಷೆ ಕೊಡುತ್ತಾನೆ. ಅವರೆಲ್ಲರೂ ಶರಣರಾಗುತ್ತಾರೆ. ಅರಮನೆಯ ವರ್ಚಸ್ಸಿಗಿಂತ ಮಹಾಮನೆಯ ವರ್ಚಸ್ಸು ಅಧಿಕವಾದಾಗ, ಬ್ರಾಹಣರ ಔನ್ನತ್ಯಕ್ಕೆ ಕುತ್ತು ಬಂದಾಗ, ಕ್ರಮಿತ ಮೊದಲಾದವರು ಬಿಜ್ಜಳನ ಕಿವಿ ಚುಚ್ಚುತ್ತಾರೆ. ಅದನ್ನು ನಿಜವೆಂದು ಭಾವಿಸಿ ಬಿಜ್ಜಳ ಬಸವಣ್ಣ ಮತ್ತು ಶರಣರ ವಿರುದ್ದ ಕಾರ್ಯ ತಂತ್ರಗಳನ್ನು ರೂಪಿಸುತ್ತಾನೆ. ಅದರ ಪ್ರತಿಫಲವೇ ಹರಳಯ್ಯ ಮತ್ತು ಮಧುವರಸರ ನೇಣು. ಬಸವಣ್ಣ ಇದರಿಂದ ಬೇಸತ್ತು ಕಲ್ಯಾಣ ತೊರೆಯುವ ಹಂಬಲದಿಂದಿದ್ದಾನೆ. ಆದರೆ ದ್ವಂದ್ವ ಮನಸ್ಸಿನ ಬಿಜ್ಜಳನಿಗೆ ಬಸವಣ್ಣನನ್ನು ಕಳೆದುಕೊಳ್ಳುವ ಅಥವಾ ಒಪ್ಪಿಕೊಳ್ಳುವ ಗೊಂದಲದಲ್ಲಿದ್ದಾನೆ. ಕಾರಣ ಕೊಂಡೆಯರ ಚಾಡಿ. ಹಾಗಾಗಿ ಬಸವಣ್ಣ ಮತ್ತು ಬಿಜ್ಜಳನ ನಡುವೆ ಒಂದು ರೀತಿಯ ಧರ್ಮ ಸಂಘರ್ಷದ ವಾದ ವಿವಾದಗಳು ನಡೆಯುತ್ತವೆ.

ಬಸವಣ್ಣ ಮತ್ತು ಬಿಜ್ಜಳ ಇಬ್ಬರೂ ಸೂಳೆ ಸಾವಂತ್ರಿಯ ಮನೆಯಲ್ಲಿ ಸಂಧಿಸುತ್ತಾರೆ. ಆದರೆ ಸಂಧಿಸುವ ಕಾರಣ ಇಬ್ಬರಲ್ಲೂ ಬೇರೆ-ಬೇರೆಯಾಗಿದೆ. ದೈಹಿಕ ತೃಷೆಯನ್ನು ತೀರಿಸಿಕೊಳ್ಳುವ ನೆವದಲ್ಲಿ ಬಿಜ್ಜಳ ಬಂದರೆ, ಲಿಂಗ ಪೂಜೆಗೆ ಅರ್ಹವಾದ ಸ್ಥಳಕ್ಕೆ ಸಂಗಯ್ಯನನ್ನು ಹುಡುಕಿಕೊಂಡು ಬಸವಣ್ಣ ಬರುತ್ತಾನೆ. ಇಬ್ಬರ ಆಲೋಚನಾ ಲಹರಿ ಬೇರೆ-ಬೇರೆಯಾಗಿರುವುದನ್ನು ಇದು ಕಾಣಿಸುತ್ತದೆ. ಅಲ್ಲದೆ ನಾಟಕದಲ್ಲಿ ದೇಶದ ರಾಜ ಮತ್ತು ಮಂತ್ರಿ ವೇಶ್ಯ ಮನೆಯಲ್ಲಿ ಸಂಧಿಸುವುದು ಒಂದು ತಿರುವನ್ನು ನೀಡುತ್ತದೆ. ಜಾತಿ ಧರ್ಮದ ಕುರಿತು ಬಸವಣ್ಣ ಮತ್ತು ಬಿಜ್ಜಳನ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ನಾಟಕಕಾರರು ತುಂಬಾ ಅರ್ಥ ಪೂರ್ಣವಾಗಿ ವಿವರಿಸಲು ಪ್ರಯತ್ನಿಸಿದ್ದಾರೆ.

ಬಸವಣ್ಣನ ಪ್ರಕಾರ ಜಾತಿ, ಧರ್ಮ ಎಂಬುದು ಮನುಷ್ಯ ನಿರ್ಮಿತ. ಅದನ್ನು ನಿರ್ಮಿಸಿದವರು ತಮ್ಮ ತಮ್ಮ ಅನುಕೂಲಗಳಿಗಾಗಿ

ಬಳಸಿಕೊಳ್ಳುತ್ತಿದ್ದಾರೆ. ಮೇಲು–ಕೀಳು ಎಂಬ ಭಾವನೆ ಉಂಟು ಮಾಡಿದ್ದಾರೆ ಎಂಬುದಾಗಿದೆ. ಆದರೆ ಇದನ್ನು ಒಪ್ಪದ ಬಿಜ್ಜಳ ಸಮಾಜದಲ್ಲಿರುವ ಪ್ರತಿಯೊಬ್ಬರಿಗೂ ಒಂದು ಜಾತಿ, ಧರ್ಮ ಎಂಬುದಿದೆ. ಇದು ಸಾವಿರಾರು ವರ್ಷಗಳಿಂದ ಬೆಳೆದು ಬಂದಿರುವಂತಹುದು. ಹಾಗಾಗಿ ಅದನ್ನು ನಾವು ಪ್ರಶ್ನಿಸುವಂತಿಲ್ಲ. ಸಾವಿರಾರು ವರ್ಷಗಳಿಂದ ಎಷ್ಟೋ ಜನ ನಿನ್ನ ರೀತಿಯ ಬದಲಾವಣೆಯನ್ನು ಬಯಸಿ ಆಗಿ ಹೋಗಿದ್ದಾರೆ. ಆದರೆ ಅದು ಸಾಧ್ಯವಾಗಿಲ್ಲ. ಅಂದರೆ ಅದರ ತಿರುಳು/ಶಕ್ತಿ ಆ ಮಟ್ಟಿಗಿದೆ. ಆದುದರಿಂದ ನೀನು ವರ್ಣಸಂಕರದ ಮದುವೆ ಮಾಡಿಸಿದ್ದು ಸರಿಯಲ್ಲ ಎಂದು ವಾದಿಸುತ್ತಾನೆ. ಆದರೆ ಬಸವಣ್ಣನ ರೀತಿಯೇ ಬೇರೆಯದಾಗಿದೆ.

> **ಬಸವ:** ಅದು ವರ್ಣಸಂಕರದ ಮದುವೆಯಲ್ಲ ಪ್ರಭು
> ಅನುಭವ ಮಂಟಪದ ಸಿದ್ದಾಂತ. ಒಂದು ಕಾಲಕ್ಕೆ
> ಮಧುವರಸರು ಬ್ರಾಹ್ಮಣರಾದುದು ನಿಜ.
> ಹರಳಯ್ಯನವರು
> ಶೂದ್ರರಾಗಿದ್ದುದೂ ನಿಜ. ಆದರೆ ಅವರು ಲಿಂಗ ದೀಕ್ಷೆ
> ತಗೊಂಡು ಶಿವ ಧರ್ಮದವರಾಗಿದ್ದಾರೆ. ಶರಣನಾದ
> ಮೇಲೆ ಹರಳಯ್ಯ ಅಂತ್ಯಜನಲ್ಲ. ಮಧುವರಸ ವಿಪ್ರನಲ್ಲ.
> ಶರಣರಿಗೆ ಜಾತಿಭೇಧವಿಲ್ಲ.

ಎಂದು ತಿಳಿಸುತ್ತಾರೆ. ಆದರೆ ಬಿಜ್ಜಳ ಸಾವಿರಾರು ವರ್ಷಗಳಿಂದ ಅನೂಚಾನವಾಗಿ ಜಾತಿ, ಧರ್ಮ ಬಂದಿರುವುದರಿಂದ ಅದನ್ನು ಜೀರ್ಣಿಸಿಕೊಳ್ಳುವ ಶಕ್ತಿ ಸಮಾಜಕಿಲ್ಲ ಎಂದು ವಾದಿಸುತ್ತಾನೆ. ಬಸವಣ್ಣ ಸಾವಿರಾರು ವರ್ಷಗಳಿಂದ ಅನೂಚಾನವಾಗಿ ಬಂದಿದೆ ಎಂದ ಮಾತ್ರಕ್ಕೆ ಅದನ್ನು ಅನುಸರಿಸಬೇಕಾದ ಅವಶ್ಯಕತೆಯಿಲ್ಲ. ಅದರಲ್ಲಿ ಹಲವಾರು ಹುಳುಕುಗಳಿವೆ ಎಂಬುದಾಗಿ ಈ ರೀತಿ ತಿಳಿಸುತ್ತಾರೆ.

> **ಬಸವಣ್ಣ:**
> ............................................................................
> ..................... ನಿಮ್ಮ ಪದ್ದತಿಯ ದೇವರು
> ಕೆಲವರನ್ನು ಮುಟ್ಟುತ್ತದೆ. ಕೆಲವರನ್ನು ದೂರ ಇಡುತ್ತದೆ
> ನನ್ನ ಪ್ರಕಾರ ಅದು ನನ್ನ ದೇವರಲ್ಲ. ನನ್ನ ದೇವರೇ
> ಆಗಿದ್ದರೆ ಇಬ್ಬರನ್ನು ಮುಟ್ಟಬೇಕು. ಇಲ್ಲಾ
> ಇಬ್ಬರನ್ನೂ ದೂರ ಇಡಬೇಕು. ಅಂದರೆ ಇಬ್ಬರಿಗೂ
> ಸಮಾನವಾಗಿರಬೇಕು.

ಈ ರೀತಿಯಲ್ಲಿ ಬಸವಣ್ಣನ ಅಭಿಪ್ರಾಯ ಜಾತಿ, ಧರ್ಮವನ್ನು ಕುರಿತು ಇರುವುದನ್ನು ಕಾಣಬಹುದು. ಇವೆಲ್ಲವೂ ಬಿಜ್ಜಳನ ಅಭಿಪ್ರಾಯದ, ನಂಬಿಕೆಯ ವಿರುದ್ಧವಿರುವುದರಿಮದ ಬಿಜ್ಜಳ ಬಸವಣ್ಣನನ್ನು ದ್ವೇಷಿಸುತ್ತಾನೆ.

ಬಿಜ್ಜಳನಲ್ಲಿ ದ್ವಂದ್ವ ಮನಸ್ಥಿತಿ ಇರುವುದು ಕೂಡ ಗೋಚರವಾಗುತ್ತದೆ. ಒಂದು ಮನಸ್ಸು ಬಸವಣ್ಣ ಮತ್ತು ಆತನ ತತ್ವ ವಿಚಾರಗಳನ್ನು ಒಪ್ಪಿಕೊಂಡರೆ, ಮತ್ತೊಂದು ಮನಸ್ಸು ತಿರಸ್ಕರಿಸುತ್ತದೆ ಮತ್ತು ದ್ವೇಷಿಸುತ್ತದೆ. ಇದನ್ನು ಬಿಜ್ಜಳನು ಸ್ವತಃ ಹುಚ್ಚಿಗೆ ಹೇಳುವ ಮಾತಿನಲ್ಲಿ ಒಪ್ಪಿಕೊಳ್ಳುತ್ತಾನೆ.

> **ಬಿಜ್ಜಳ:** ನಾನು ಒಂದಕ್ಕೊಂದು ಹೊಂದಾಣಿಕೆ ಇಲ್ಲದ
> ಎರಡು
> ಅರ್ಥಗಳಿಂದ ಕೂಡಿದ್ದೇನೆ ತಾಯೀ!
> ಮೊದಲನೇ ಅರ್ಥದಲ್ಲಿ ಬಸವಣ್ಣ ಮುಗ್ದ
> ಸಂಗಯ್ಯನನ್ನು ಸೃಷ್ಠಿಸಿದ. ನಾನು ಆತನ ಮುಗ್ದ ಮುಖ
> ಮತ್ತು ವಚನಗಳಿಂದ ತುಂಬಾ ಪ್ರಭಾವಿತನಾದೆ.
> ಇನ್ನರ್ಧದಲ್ಲಿ ಕೊಂಡೆಯರು ನನ್ನಲ್ಲಿ ಇಂದ್ರನನ್ನು
> ಸೃಷ್ಠಿಸಿ "ಇಕೋ ರಾಕ್ಷಸ – ಸಂಹಾರ ಮಾಡಿ ಪ್ರಭು"
> ಎಂದು ಒಬ್ಬ ಮುಗ್ದನನ್ನು ಎದುರು ಹಿಡಿದರು. ಸಂಹರಿಸಿ
> ನೋಡಿದರೆ ಮುಗ್ದ ಸಂಗಯ್ಯನನ್ನು ಕೊಂದು ಹಾಕಿದ್ದೆ.!

ಬಸವಣ್ಣನನ್ನು ವಿರೋಧಿಸುವಂತಹ ಜನ ಬಿಜ್ಜಳನಲ್ಲಿ ಇಲ್ಲಸಲ್ಲದ ಚಾಡಿಗಳನ್ನು ಹೇಳಿ ಆತನ ವಿರುದ್ದ ಬಿಜ್ಜಳನನ್ನು ಎತ್ತಿ ಕಟ್ಟಿ ತಮ್ಮ ಕಾರ್ಯ ಸಾಧನೆಯನನ್ನು ಮಾಡಿಕೊಳ್ಳುವುದು ನಾಟಕದಲ್ಲಿ ಅರಿವಿಗೆ ಬರುತ್ತದೆ.

ನಾಟಕದಲ್ಲಿ ಕಂಬಾರರು ಅರಮನೆ ಮತ್ತು ಮಹಾಮನೆಗಳ ನಡುವಿನ ವ್ಯತ್ಯಾಸವನ್ನು ತುಂಬ ಅದ್ಭುತವಾಗಿ ದಾಖಲಿಸಿದ್ದಾರೆ. ಬಿಜ್ಜಳ ಈಗಾಗಲೇ ಕಲ್ಯಾಣದಲ್ಲಿ ಅರಮನೆಯನ್ನು ನಿರ್ಮಿಸಿ ರಾಜ್ಯಭಾರವನ್ನು ನಡೆಸುತ್ತಿದ್ದ. ಆದರೆ ಆತನ ಆಡಳಿತದ ಅವಧಿಯಲ್ಲಿ ಸರ್ವರಿಗೂ ಸಮಾನ ಅವಕಾಶಗಳು ಇಲ್ಲದಿರುವುದನ್ನು ಮನಗಂಡ ಬಸವಣ್ಣ ಮಹಾಮನೆಯನ್ನು ನಿರ್ಮಿಸುತ್ತಾನೆ. ಇದರ ಉದ್ದೇಶ ಸಾಮಾನ್ಯರಿಗೂ ಸಮಾನವಾದ ಸನ್ಮಾನ ಸಿಗಬೇಕು ಎಂಬುದು. ಅರಮನೆ ಮತ್ತು ಮಹಾಮನೆ ಇವುಗಳ ಆಶಯ, ಗುರಿ ಬೇರೆ–ಬೇರೆಯಾಗಿದ್ದವು. ಇವುಗಳೆರಡರ ವ್ಯತ್ಯಾಸವನ್ನು ಹುಚ್ಚಿಯ ಮಾತುಗಳ ಮುಖಾಂತರ ಅರ್ಥಪೂರ್ಣವಾಗಿ ಕಟ್ಟಿಕೊಟ್ಟಿದ್ದಾರೆ.

> **ಹುಚ್ಚಿ:** ....................................................................
> ....................................................................
> ಮಹಾಮನೆಗೆ ಶರಣರು ಬೇಕು.
> ಅವರಿಗೆ ಅರಮನೆಯ ಗುರುತಿಲ್ಲ.
> ಅವರು ತಂತಮ್ಮ ಕಾಯಕಗಳಲ್ಲಿ ನಿರತರು
> ಅರಮನೆಗೆ ಕೊಂಡೆಯರು ಬೇಕು. ಕೊಂಡೆಯರು
> ಚಾಡಿ ಹೇಳಿದರು.
> ಚಾಡಿಯ ಸಮರ್ಥನೆಗೆ ಸುಳ್ಳು ಹೇಳಿದರು.
> ಸುಳ್ಳನ್ನು ನಿಜ ಮಾಡಲು ಮೋಸ ಮಾಡಿದರು.
> ಪರಿಣಾಮವೆಂದರೆ ಶರಣರು ಕಣ್ಣು
> ಕಳೆದುಕೊಳ್ಳಬೇಕಾಯಿತು.

ಶರಣರು ಮಹಾಮನೆಯ ಮುಖಾಂತರ ಪ್ರಸಿದ್ದಿಗೆ ಬಂದರೆ, ಅದನ್ನು ಸಹಿಸದವರು ಅರಮನೆಯ ಮುಖಾಂತರ ಮಾಡಿದ ಪಿತೂರಿ, ಆ ಮೂಲಕ ಉಂಟಾದ ಪರಿಣಾಮ, ಮಹಾಮನೆ ಮತ್ತು ಅರಮನೆ ನಡುವೆ ಸಂಘರ್ಷ ಇತ್ಯಾದಿ ವಿಚಾರಗಳನ್ನು ನಾಟಕಕಾರರು ಸಂಘರ್ಷದ ಕಾರಣ ಹುಡುಕುವಲ್ಲಿ ತಿಳಿಸಿದ್ದಾರೆ.

ಬಸವಣ್ಣನವರು ಹುಟ್ಟು ಹಾಕಿದ ಸಾಮಾಜಿಕ ಚಳುವಳಿ ಯಶಸ್ವಿಯಾಗದಿರಲು ಕಾರಣವೇನು? ಎಂಬ ಪ್ರಶ್ನೆಗೂ ನಾಟಕಕಾರರು ಉತ್ತರವನ್ನು ಹುಡುಕುವ ಪ್ರಯತ್ನವನ್ನು ಮಾಡಿದ್ದಾರೆ. ಅವರ ಪ್ರಕಾರ ಕಾಲ ಪಕ್ವವಾಗಿಲ್ಲದ ಸಮಯದಲ್ಲಿ ಅಂದರೆ ಸಂಪೂರ್ಣ ಬದಲಾವಣೆಗೆ ಮನಸ್ಸುಗಳು ಮಾಗದೇ ಇರುವ ಸಮಯದಲ್ಲಿ ಚಳವಳಿಯನ್ನು ಮಾಡಿದ್ದರಿಂದ ಚಳುವಳಿ ವಿಫಲವಾಗಿದೆ ಎಂಬುದಾಗಿ ತಿಳಿಸಿದ್ದಾರೆ.

> **ಹುಚ್ಚಿ:** ಕೊಂಚ ಅವಸರವಾಯ್ತು. ಅತಿ ಉತ್ಸಾಹದಲ್ಲಿ
> ಮಧ್ಯರಾತ್ರಿಯಲ್ಲೇ ಎದ್ದು ಕೂತೆ ನೀನು!
> ಎದ್ದವನೇ ಮುಖಕ್ಕೆ ತಣ್ಣೀರೆರಚಿಕೊಂಡು
> ಬನ್ನಿರೋ ಬನ್ನಿರಿ ಹೊಸ ಬೆಳಕಿನ ಉದಯಕ್ಕೆ!
> ಅಂತ ಜನಗಳ ಕರೆದೆ.
> ನಿಜ ಹೇಳಬೇಕೆಂದರೆ ಆಗಿನ್ನೂ ಬೆಳಗಿನ ತಾರೆ
> ಮೂಡಿರಲೇ ಇಲ್ಲ.

ಹೀಗೆ ಕಾಲವಲ್ಲದ ಕಾಲದಲ್ಲಿ ಚಳುವಳಿ ಆರಂಭಿಸಿದ್ದರಿಂದ, ಶತಮಾನದಿಂದ ಮೌಢ್ಯತೆಯ ಅಂಧಕಾರದಲ್ಲಿ ಮುಳುಗಿದ್ದ ಜನ ಬೆಳಕನ್ನು ಕಾಣಲಾರದೆ ಕತ್ತಲೆಯಲ್ಲಿಯೇ ನಿದ್ರಿಸಿದರು. ಹಾಗಾಗಿ ಚಳುವಳಿ ಯಶಸ್ಸಾಗಲಿಲ್ಲ ಎಂಬುದಾಗಿ ನಾಟಕಕಾರರು ತಿಳಿಸಿದ್ದಾರೆ. ಇಡೀ ನಾಟಕದುದ್ದಕ್ಕೂ ಕತ್ತಲನ್ನು ತರುವುದರ ಮೂಲಕ ನಾಟಕಕಾರರು ಅಜ್ಞಾನ, ಅಂಧಕಾರದಲ್ಲಿ ಕಲ್ಯಾಣನಗರ ಮುಳುಗಿ ಹೋಗಿರುವುದನ್ನು ತಿಳಿಸಿದ್ದಾರೆ. ಇಡೀ ನಾಟಕ ಶಿವರಾತ್ರಿಯ ಕತ್ತಲಿನಲ್ಲಿಯೇ ನಡೆಯುತ್ತಿರುವುದು ಮತ್ತು ಒಂದು ರಾತ್ರಿಯ ಅವಧಿಯಲ್ಲಿಯೇ ಈ ಎಲ್ಲಾ ಘಟನೆಗಳು ಸಂಭವಿಸುವ ರೀತಿಯಲ್ಲಿ ಚಿತ್ರಿಸಿದ್ದಾರೆ. ನಾಟಕದಲ್ಲಿ ಕಲ್ಯಾಣನಗರ ಮತ್ತು ಉತ್ತರ ಕರ್ನಾಟಕದ ಭಾಷೆ ಸಂಭ್ರಮಿಸಿದೆ. ಕಂಬಾರರು ಇತರ ಬಸವಣ್ಣನನ್ನು ಕುರಿತು ಬಂದಿರುವ ನಾಟಕಗಳಿಗಿಂತ ವಿಭಿನ್ನವಾದ ರೀತಿಯಲ್ಲಿ ನಾಟಕವನ್ನು ಚಿತ್ರಿಸಿದ್ದಾರೆ. ಈಗಾಗಲೇ ತಿಳಿಸಿರುವಂತೆ ಬಸವಣ್ಣನವರನ್ನು ಬೇರೆ-ಬೇರೆ ದೃಷ್ಟಿಕೋನಗಳಲ್ಲಿ ನೋಡುವ ಪ್ರಯತ್ನ, ವರ್ಣ ಸಂಕರದ ಕುರಿತ ಧರ್ಮ ಸಂಘರ್ಷ, ಮಹಾಮನೆಯ ನಿರ್ಮಾಣದಿಂದ ಉಂಟಾದ ಅವಘಡ, ಚಳುವಳಿಯ ವಿಫಲತೆಗೆ ಕಾರಣ ... ಹೀಗೆ ತಮ್ಮದೇ ಆದ ವಿಭಿನ್ನ ರೀತಿಯಲ್ಲಿ ನಾಟಕವನ್ನು ರಚಿಸುವುದರ ಮೂಲಕ ಓದುಗರು ಅದನ್ನು ಆಲೋಚಿಸುವಂತೆ ಮಾಡಿದ್ದಾರೆ.

**ಪರಾಮರ್ಶನ ಗ್ರಂಥಗಳು**

1. ಚಂದ್ರಶೇಖರ ಕಂಬಾರ : ಶಿವರಾತ್ರಿ, ಅಂಕಿತ ಪ್ರಕಾಶನ, ಬೆಂಗಳೂರು – 2011
2. ಡಾ. ಬಸವರಾಜ ಮಲಶೆಟ್ಟಿ : ಚಂದ್ರಶೇಖರ ಕಂಬಾರ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು – 2006
3. ಡಾ. ವೀರೇಶ ಬಡಿಗೇರ : ನಾಡೋಜ ಡಾ. ಚಂದ್ರಶೇಖರ ಕಂಬಾರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – 2011
4. ಡಾ. ಡಿ. ನಾಗಣ್ಣ : ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ. ಚಂದ್ರಶೇಖರ ಕಂಬಾರ, ವಿಸ್ಮಯ ಪ್ರಕಾಶನ, ಮೈಸೂರು – 2011